# ವಿಮರ್ಶಕರಿಂದ ಪ್ರಶಸ್ತಿ!




ಸಿನಿಮಾರಂಗದವರಿಗೂ ಪತ್ರಕರ್ತರಿಗೂ ಒಂದು ಬಗೆಯ ಲವ್ ಆ್ಯಂಡ್ ಹೇಟ್ ರಿಲೇಷನ್. ಸಿನಿಮಾ ವಿಮರ್ಶಕರ ವಿಷಯದಲ್ಲಂತೂ ಇದು ಇನ್ನೂ ಸತ್ಯ. ಪ್ರತಿ ಶುಕ್ರವಾರ ಬಿಡುಗಡೆಯಾಗುವ ಸಿನಿಮಾಗಳಿಗೆ ಪತ್ರಿಕೆಗಳಲ್ಲಿ ಎಂಥ ವಿಮರ್ಶೆ ಬರುತ್ತದೆ ಎಂಬುದನ್ನು ಚಿತ್ರರಂಗದವರೆಲ್ಲ ಕಾದು ನೋಡುತ್ತಾರೆ. ಮೆಚ್ಚಿ ಬರೆದಾಗ ಹಿಗ್ಗುವುದು, ಚುಚ್ಚಿ ಬರೆದಾಗ ಮುನಿಸಿಕೊಳ್ಳುವುದೂ ನಡೆಯುತ್ತಲೇ ಇರುತ್ತದೆ. ಆದರೆ ಹೀಗೆ ಪ್ರತಿವಾರ ಸಿನಿಮಾಗಳನ್ನು ವೀಕ್ಷಿಸಿ ವಿಮರ್ಶಿಸುವ ಚಿತ್ರವಿಮರ್ಶಕರೆಲ್ಲ ಸೇರಿ ಪ್ರಶಸ್ತಿ ಕೊಟ್ಟರೆ ಹೇಗಿರುತ್ತದೆ?

ಇದೇ ಪರಿಕಲ್ಪನೆಯಡಿಯಲ್ಲಿ 'ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿ' ಹುಟ್ಟಿಕೊಂಡಿದೆ. ಇದು ಚಿತ್ರವಿಮರ್ಶಕರು, ಪತ್ರಕರ್ತರೇ ಸೇರಿಕೊಂಡು ಮಾಡಿಕೊಂಡಿರುವ ಅಕಾಡೆಮಿ. ಇದರಿಂದ ಹತ್ತು ಜನ ಹಿರಿಯ ಸಿನಿಮಾ ಪತ್ರಕರ್ತರನ್ನು ತೀರ್ಪುಗಾರರನ್ನಾಗಿಯೂ ಆಯ್ಕೆ ಮಾಡಲಾಗಿದೆ. ಆ ತೀರ್ಪುಗಾರರು 2019ರಲ್ಲಿ ತೆರೆಕಂಡ ಸಿನಿಮಾಗಳನ್ನು ವೀಕ್ಷಿಸಿ ಪ್ರಶಸ್ತಿಗಳಿಗೆ ಸಿನಿಮಾಗಳನ್ನು ಆಯ್ಕೆ ಮಾಡುತ್ತಾರೆ. ಒಟ್ಟು 20 ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ 'ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿ' ಲಾಂಛನ ಬಿಡುಗಡೆ ಮಾಡಲಾಗಿದೆ. ನಟ ಶಿವರಾಜ್‌ಕುಮಾರ್ ಲಾಂಛನ ಬಿಡುಗಡೆ ಮಾಡಿದ್ದಾರೆ. ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಗೀತಸಾಹಿತಿ ನಾಗೇಂದ್ರ ಪ್ರಸಾದ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಜಯರಾಜ್ ಅವರೂ ಈ ಕಾರ್ಯಕ್ರಮದಲ್ಲಿ ಹಾಜರಿದ್ದರು. 'ವಿಮರ್ಶಕರೇ ಸಿನಿಮಾಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ಕೊಡುವ ಈ ಪ್ರಯತ್ನಕ್ಕೆ ಚಿತ್ರರಂಗದ ಸಂಪೂರ್ಣ ಬೆಂಬಲವಿದೆ' ಎಂಬ ಮಾತನ್ನು ನಾಲ್ವರೂ ಹೇಳಿದರು.

ಅಕಾಡೆಮಿ ಕಾರ್ಯಸೂಚಿ ಮತ್ತು ರೂಪುರೇಷೆಗಳು ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ನಂತರದ ದಿನಗಳಲ್ಲಿ ಪ್ರಶಸ್ತಿ ಕೊಡುವುದರ ಜೊತೆಗೆ ಸಿನಿಮಾಸಂಬಂಧಿ ಚಟುವಟಿಕೆಗಳ ಕೇಂದ್ರವಾಗಿ ರೂಪುಗೊಳ್ಳುವ ಆಶಯ ಈ ಅಕಾಡೆಮಿಗಿದೆ. ಪತ್ರಕರ್ತರ ಸಂಘಟನೆಯ, ಸಿನಿಮಾ ಮಾಧ್ಯಮದ ಕುರಿತ ಶಿಕ್ಷಣ, ವಿಮರ್ಶೆಯ ಪರಿಕಲ್ಪನೆಯ ಚರ್ಚೆ, ಸಂವಾದಗಳು ಹೀಗೆ ಹಲವು ವಿಷಯಗಳನ್ನು ಒಳಗೊಂಡು ತನ್ನ ಚಟುವಟಿಕೆಯನ್ನು ವಿಸ್ತರಿಸಿಕೊಂಡರೆ, ಮುಂದಿನ ದಿನಗಳಲ್ಲಿ 'ಕರ್ನಾಟಕ ಫಿಲ್ಮ್ ಕ್ರಿಟಿಕ್ ಅಕಾಡೆಮಿ' ತನ್ನ ಹೆಸರಿಗೆ ಸಾರ್ಥಕ ಅರ್ಥ ಕೊಡುವ ನಿಟ್ಟಿನಲ್ಲಿ ಬೆಳೆಯುವ ಎಲ್ಲ ಸಾಧ್ಯತೆಗಳೂ ಇವೆ.

# ಶ್ರೇಯಸ್‌ಗೆ ಜೊತೆಯಾದ ಕಣ್ಸನ್ನೆ ಹುಡುಗಿ

ನಿರ್ಮಾಪಕ ಕೆ. ಮಂಜು ಮಗ ಶ್ರೇಯಸ್ 'ಪಡ್ಡೆಹುಲಿ' ಸಿನಿಮಾ ಮೂಲಕ ಸಿನಿಮಾಗೆ ಎಂಟ್ರಿ ಕೊಟ್ಟಿರುವುದು ಗೊತ್ತೇಇದೆ. 'ಪಡ್ಡೆಹುಲಿ'ಯ ಗರ್ಜನೆಗೆ ಜನರೇನೂ ಕಮಕ್ ಕಿಮಕ್ ಅನ್ನಲಿಲ್ಲ. ಇದೀಗ ಅವರು 'ವಿಷ್ಣುಪ್ರಿಯ'ನಾಗಿ ಮತ್ತೆ ತೆರೆಯ ಮೇಲೆ ಬರಲು ಸಜ್ಜಾಗಿದ್ದಾರೆ. ಶ್ರೇಯಸ್ ನಟನೆಯ ಎರಡನೇ ಸಿನಿಮಾ 'ವಿಷ್ಣುಪ್ರಿಯ' ಸಿನಿಮಾಗೆ ಕೆ.ವಿ. ಪ್ರಕಾಶ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.





ಧಾರವಾಡದ ಸಿಂಧೂಶ್ರೀ ಎಂಬವರ ಕಾದಂಬರಿ ಆಧಾರಿತ ಸಿನಿಮಾ, ಮಗನಿಗೆ ಬ್ರೇಕ್ ಕೊಡುತ್ತದೆ ಎಂಬ ವಿಶ್ವಾಸದಲ್ಲಿ ಮಂಜು ಇದ್ದಾರೆ. 90ರ ದಶಕದಲ್ಲಿ ನಡೆಯುವ ಪ್ರೇಮಕಥೆಯನ್ನು ಹೊಂದಿರುವ 'ವಿಷ್ಣುಪ್ರಿಯ'ದಲ್ಲಿ 'ಕಣ್ಸನ್ನೆ' ಹುಡುಗಿ ಪ್ರಿಯಾ ವಾರಿಯರ್ ಕನ್ನಡಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ.

ಮೊದಲ ಸಿನಿಮಾ ನಂತರ ಶ್ರೇಯಸ್ ಅರಸಿಕೊಂಡು ಸುಮಾರು 80ಕ್ಕೂ ಹೆಚ್ಚು ಸ್ಕ್ರಿಪ್ಟ್‌ಗಳು ಬಂದಿದ್ದವಂತೆ. ಕಥೆಯ ಕಾರಣಕ್ಕೇ ಅವುಗಳನ್ನು ತಿರಸ್ಕರಿಸಿದ್ದ ಶ್ರೇಯಸ್, 'ವಿಷ್ಣುಪ್ರಿಯ'ವನ್ನು ಮನಸಾರೆ ಒಪ್ಪಿಕೊಂಡಿದ್ದಾರೆ.

ಇತ್ತೀಚೆಗೆ ನಡೆದ ಈ ಸಿನಿಮಾದ ಮುಹೂರ್ತ ಕಾರ್ಯಕ್ರಮದಲ್ಲಿ ಪ್ರಿಯಾ ವಾರಿಯರ್ ಕೂಡ ಹಾಜರಿದ್ದರು. ಮೊದಲ ಬಾರಿಗೆ ಕನ್ನಡ ಸಿನಿಮಾದಲ್ಲಿ ನಟಿಸುತ್ತಿರುವ ಹುಮ್ಮಸ್ಸು ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಹಲವು ಶೇಡ್‌ಗಳಿರುವ, ಅಭಿನಯಪ್ರಾಧಾನ್ಯ ಪಾತ್ರ ತನ್ನದು ಎಂಬುದು ಅವರ ಮಾತು. ಪ್ರಿಯಾ ನಗು, ಶ್ರೇಯಸ್ ಸಿನಿಮಾ ಕೆರಿಯರ್‌ನಲ್ಲಿ ಗೆಲುವಿನ ಮುನ್ನುಡಿ ಬರೆಯುತ್ತದೆಯೋ ಎಂಬುದನ್ನು ಕಾದುನೋಡಬೇಕಷ್ಟೆ.

ಚಿತ್ರ: ಕೆ. ಎನ್. ನಾಗೇಶ್‌ಕುಮಾರ್